**ಸಾಕ್ಷಿಯನ್ನು ದಿಃ 24.2.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಆರ್.ಎಸ್ ವಕೀಲರಿಂದಃ**

ನಾನು ಮರವಳ್ಳಿ ಗ್ರಾಮದ ನಿವಾಸಿ. ದೇಶೀಹಳ್ಳಿಯಲ್ಲಿ ನಮ್ಮ ಮನೆ ಇದ್ದು, ಅಲ್ಲೇ ವಾಸಿಸುತ್ತೇನೆ ಎಂದರೆ ಸರಿ. ವಾದಿಯ ಗಂಡನ ಬಳಿ ನಾನು ವಾಹನ ಚಾಲಕನಾಗಿ ಕೆಲಸವನ್ನು ಮಾಡುತ್ತಿದ್ದೇನೆ ಎಂದರೆ ಸರಿ. ವಾದಿಯು ದಾವಾ ಆಸ್ತಿಯನ್ನು ಸುರೇಶ್ ಕುಮಾರ್ ಎಂಬುವವರಿಂದ ಖರೀದಿ ಮಾಡಿರುತ್ತಾರೆ. ಸುರೇಶ್ ಕುಮಾರ್ ಇವರಿಗೆ ಅವರ ದೊಡ್ಡಮ್ಮನಾದ ವೆಂಕಟಮ್ಮ ಇವರ ಕಡೆಯಿಂದ ದಾವಾ ಆಸ್ತಿ ಬಂದಿರುತ್ತದೆ. ವೆಂಕಟಮ್ಮ ಇವರ ಹೆಸರಿನಲ್ಲಿರುವ ಖಾತಾ ನಂಬರ್ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಮೊದಲು ವೆಂಕಟಮ್ಮ ಇವರ ಹೆಸರಿನಲ್ಲಿರುವ ದಾಖಲಾತಿಗಳನ್ನು ನಾನು ನೋಡಿಲ್ಲ. ಸಾಕ್ಷಿ ಮುಂದುವರೆದು ಸುರೇಶ್ ರವರ ಕಡೆಯಿಂದ ದಾವಾ ಆಸ್ತಿ ವಾದಿಗೆ ಬಂದಿರುವ ಬಗ್ಗೆ ನನಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ.

ಸುರೇಶ್ ಕುಮಾರ್ ರವರ ಹೆಸರಿನಲ್ಲಿರುವ ದಾಖಲಾತಿಗಳನ್ನು ನಾನು ನೋಡಿದ್ದೇನೆ. ಸುರೇಶ್ ಕುಮಾರ್ ರವರ ಹೆಸರಿನಲ್ಲಿರುವ ಇ-ಖಾತಾ ನಂಬರ್ ನನಗೆ ಹೇಳಲು ಬರುವುದಿಲ್ಲ. ವಾದಿಯ ಹೆಸರಿನಲ್ಲಿ ಇ-ಖಾತಾ ಇರುತ್ತದೆ, ಆದರೆ ಇ-ಖಾತಾ ನಂಬರನ್ನು ನನಗೆ ಹೇಳಲು ಬರುವುದಿಲ್ಲ. ಸಾಮಾನ್ಯವಾಗಿ ಸೈಟಿನಲ್ಲಿ ಮನೆ ಇದ್ದರೆ ಇ-ಖಾತೆಯಲ್ಲಿ ಮನೆ ಇರುವ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಮನೆ ಇರುತ್ತದೆ. ಅದರ ವಿಸ್ತೀರ್ಣ 25 )( 25 ಅಡಿಗಳು. ಮುಂಭಾಗದಲ್ಲಿ ಶೀಟ್ ಇರುತ್ತದೆ, ಇನ್ನುಳಿದ ಭಾಗದಲ್ಲಿ ಕಲ್ಲು ಚಪ್ಪಡಿ ಮನೆ ಇರುತ್ತದೆ. ವಾದಿ ಅರುಣ ಹಾಗೂ ಸುರೇಶ್ ಕುಮಾರ್ ಇವರ ಖರೀದಿ ಪತ್ರದಲ್ಲಿ ಮನೆ ಇರುವ ಬಗ್ಗೆ ನಮೂದು ಇರುತ್ತದೆ. ದಾವಾ ಮನೆಯು 2 ಹಾಲ್, 1 ರೂಮ್, 1 ಅಡುಗೆ ಮನೆ ಇರುತ್ತದೆ. ಸದರಿ ಮನೆಯನ್ನು ನಾನು ಚಿಕ್ಕವರಿದ್ದಾಗಿನಿಂದಲೂ ನೋಡುತ್ತಾ ಬಂದಿರುತ್ತೇನೆ. ಸದರಿ ಮನೆಯಲ್ಲಿ ವಾದಿಯು ಇರುತ್ತಾರೆ. ಸದರಿ ಮನೆಯು ಹಳೆ ಮನೆಯಾಗಿದ್ದು, ವಾಸ ಮಾಡಲು ಸೂಕ್ತವಾಗಿರುತ್ತದೆ. ಸದರಿ ಮನೆಯ

ಮುಂಬಾಗಿಲು ಪೂರ್ವ ದಿಕ್ಕಿನ ಕಡೆ ಇರುತ್ತದೆ. ಸಂಪೂರ್ಣ ಆಸ್ತಿಯಲ್ಲಿ ಈ ಮೇಲೆ ಹೇಳಿರುವ ಮನೆ ದಕ್ಷಿಣ ದಿಕ್ಕಿನ ಕಡೆ ಇರುತ್ತದೆ. ಮನೆಯನ್ನು ಹೊರತು ಪಡಿಸಿ ಉಳಿದ ಜಾಗದ ವಿಸ್ತೀರ್ಣವನ್ನು ನನಗೆ ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ನಾನು ಎಸ್.ಎಸ್.ಎಲ್.ಸಿ ವರೆಗೂ ವಿದ್ಯಾಭ್ಯಾಸವನ್ನು ಮಾಡಿದ್ದೇನೆ. ನಾನು ವಾಹನ ಚಾಲಕನಾಗಿ ಹಾಗೂ ಸೆಂಟ್ರಿಂಗ್ ಕೆಲಸವನ್ನು ಮಾಡುತ್ತೇನೆ. ಸಾಮಾನ್ಯವಾಗಿ ಸೆಂಟ್ರಿಂಗ್ ಕೆಲಸ ತೆಗೆದುಕೊಳ್ಳುವಾಗ ಚದರ ಲೆಕ್ಕದ ಮೇಲೆ ಕೆಲಸವನ್ನು ತೆಗೆದುಕೊಳ್ಳುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೇಸ್ತ್ರಿ ಕೆಲಸವನ್ನು ತೆಗೆದುಕೊಳ್ಳುತ್ತಾರೆ, ನಾವು ಅವರ ಬಳಿ ಲೇಬರ್ ಆಗಿ ಕೆಲಸ ಮಾಡುತ್ತೇನೆ.

ದಾವಾ ಆಸ್ತಿಗೆ ಸಂಬಧಪಟ್ಟ ದಾಖಲಾತಿಗಳಲ್ಲಿ ರಸ್ತೆಯು ಯಾವ ದಿಕ್ಕಿನಲ್ಲಿ ಇರುವ ಬಗ್ಗೆ ನಮೂದಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿಯು ಪಶ್ಚಿಮ ದಿಕ್ಕಿನ ಕಡೆಗೆ ರಸ್ತೆ ಇದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಊರಿನಲ್ಲಿಯೇ ಇದೆ. ವಾದಿಯು ದಾವಾ ಆಸ್ತಿಯನ್ನು 2020 ರಲ್ಲಿ ಖರೀದಿ ಮಾಡಿದ್ದು, 2021 ರಲ್ಲಿ ಪ್ರತಿವಾದಿಯು ಆಸ್ತಿ ತಮ್ಮದೆಂದು ನುಡಿದಿರುವ ಕಾರಣದಿಂದಾಗಿ ಪ್ರಸ್ತುತ ದಾವೆಯನ್ನು ಹೂಡಿದ್ದಾರೆ. ಯಾವ ದಿನಾಂಕ ಹಾಗೂ ತಿಂಗಳಿನಂದು ಪ್ರತಿವಾದಿಯರು ಆಸ್ತಿ ತಮ್ಮದಾಗಿ ನುಡಿದಿದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ.

ಪ್ರತಿವಾದಿಯು ನನ್ನ ಸಂಬಂಧಿ. ಪ್ರತಿವಾದಿಯ ಆಸ್ತಿ ಸರ್ವೆ ನಂಃ2/8 ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದರ ಕ್ಷೇತ್ರ 8 ಗುಂಟೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ಯಾವಾಗ ಹಾಗೂ ಯಾರ ಕಡೆಯಿಂದ ಪ್ರತಿವಾದಿಯು ಖರೀದಿ ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪ್ರಸ್ತುತ ದಾವೆಯಲ್ಲಿ ಪ್ರತಿವಾದಿಯು ಹಾಕಿರುವ ತಕರಾರಿನ ಬಗ್ಗೆ ನನಗೆ ಗೊತ್ತಿಲ್ಲ. ವಾದಿಯ ಗಂಡನ ಕಡೆಗೆ ವಾಹನ ಚಾಲಕನಾಗಿ ಕೆಲಸ ಮಾಡುತ್ತಿರುವ ಕಾರಣದಿಂದಾಗಿ ವಾದಿಯ ಮಾತುಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸಂಬಂಧಪಟ್ಟ ಆಸ್ತಿಗೆ ವಾದಿಯು ತೊಂದರೆ ಕೊಡಬೇಕೆಂಬ ದುರುದ್ದೇಶದಿಂದ ಸುಳ್ಳು ದಾವೆ ಹೂಡಿದ್ದು ಸದರಿ ದಾವೆಗೆ ಅನುಗುಣವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**(ಸುಕೇತಾ ಎಸ್ ಹದ್ಲಿ)**
1 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬಂಗಾರಪೇಟೆ